## ಮಕ್ಕಳ ಹಾಸಿಗೆ ಮೃದುವಾಗಿದ್ದರೆ ಹುಷಾರು!

ತಮ್ಮ ಮಕ್ಕಳು ಹಾಯಾಗಿರಲೆಂದು ತಾಯಂದಿರು ಮೆತ್ತಗಿನ ಹಾಸಿಗೆ ಹಾಸಿ ಜೋಗುಳ ಹಾಡುವುದುಂಟು. ಆದರೆ ಅದೇ ಮೆತ್ತಗಿನ ಹಾಸಿಗೆ ಮಗುವಿನ ಪ್ರಾಣಕ್ಕೆ ಕುತ್ತು ತರಬಹುದು ಎಂದು ಅಧ್ಯಯನವೊಂದು ಹೇಳಿದೆ.

ಬಹುತೇಕ ಪೋಷಕರು ಮಕ್ಕಳು ಮೆತ್ತಗಿನ ಹಾಸಿಗೆ ಮೇಲೆ ಮಲಗಿದರೆ ಅವರು ಸುರಕ್ಷಿತ ಹಾಗೂ ಯಾವುದೇ ರೀತಿಯ ಪೆಟ್ಟಾಗದು ಎಂದು ಭಾವಿಸಿರುತ್ತಾರೆ. ಆದರೆ ಇವರ ಈ ಅನಿಸಿಕೆ ತಪ್ಪು ಎಂದು ಡಾ. ರೋಚೆಲ್ ಮೂನ್ ಹೇಳಿದ್ದಾರೆ.

'ಮಕ್ಕಳು ಆಡುವ ಸಂದರ್ಭದಲ್ಲಿ ಮೆತ್ತಗಿನ ಹಾಸಿಗೆ ಒಳ್ಳೆಯದೇ. ಆದರೆ ಮಲಗಲು ಮೃದು ಹಾಸಿಗೆ ಬಳಸಲೇಬೇಡಿ' ಎಂದು ಮೂನ್ ಎಚ್ಚರಿಸಿದ್ದಾರೆ.

ಜಾಗತಿಕ ಮಟ್ಟದಲ್ಲಿ ನಡೆಸಿದ ಸಮೀಕ್ಷೆ ಪ್ರಕಾರ, ಮೃದು ಹಾಸಿಗೆಯಿಂದ ತೊಂದರೆಗೆ ಒಳಗಾದವರಲ್ಲಿ ಬಿಳಿಯರ ಮಕ್ಕಳಿಗೆ ಹೋಲಿಸಿದಲ್ಲಿ ಕಪ್ಪು ಮಕ್ಕಳ ಸಂಖ್ಯೆ ದ್ವಿಗುಣವಂತೆ. ಇನ್ನು ಏಷ್ಯಾ ಭಾಗದಲ್ಲಿ ಮೆತ್ತಗಿನ ಹಾಸಿಗೆಯಿಂದ ಉಸಿರು ಗಟ್ಟುವಿಕೆ, ಕಾರಣವಿಲ್ಲದೆ ತಕ್ಷಣ ಮಕ್ಕಳು ಸಾಯುವ ಪ್ರಕರಣ (ಎಸ್‌ಐಡಿಎಸ್) ಅಥವಾ 'ಕ್ರೈಬ್ ಡೆತ್' ಪ್ರಕರಣಗಳು ಸಾಕಷ್ಟು ವರದಿಯಾಗಿವೆ. ಮಕ್ಕಳನ್ನು ಮಲಗಿಸುವಾಗ ಅವೈಜ್ಞಾನಿಕವಾಗಿ ಉಸಿರು ಕಟ್ಟುವಂತೆ ಮಲಗಿಸಿದ್ದರಿಂದಲೂ ಸಾವಿನ ಪ್ರಕರಣಗಳು ಹೆಚ್ಚು ಸಂಖ್ಯೆಯಲ್ಲಿ ವರದಿಯಾಗಿವೆ ಎಂದು ಅವರು ತಿಳಿಸಿದ್ದಾರೆ.

## 'ಹಾರರ್' ಸಿನಿಮಾ: ಮಹಿಳೆಯರಿಗೇಕೆ ಭಯ?

ಪುರುಷ ಹಾಗೂ ಮಹಿಳೆಯನ್ನು ಒಂದು ಭಯಾನಕ ದೆವ್ವದ ಚಿತ್ರ ನೋಡಲು ಬಿಡಿ. ಪುರುಷರಿಗಿಂತ ಮಹಿಳೆಯರಿಗೇ ಹೆಚ್ಚು ಭಯವಾಗುತ್ತದೆ. ಹೀಗೇಕೆ?

ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಪ್ರಯತ್ನವನ್ನು ಲಂಡನ್ ವಿವಿಯ ಸಂಶೋಧಕರು ನಡೆಸಿದ್ದಾರೆ. ಇವರ ಪ್ರಕಾರ ಪುರುಷ ಹಾಗೂ ಮಹಿಳೆಯರಲ್ಲಿ ಭಾವನೆಗಳನ್ನು ವ್ಯಕ್ತಪಡಿಸುವಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ. ಮಹಿಳೆಯರು ತಮ್ಮ ಭಾವನೆಗಳನ್ನು ಕ್ಷಣಮಾತ್ರದಲ್ಲಿ ವ್ಯಕ್ತಪಡಿಸುತ್ತಾರೆ. ಇಂಥದ್ದೇ ಹಲವು ಅನುಭವಗಳು ಅವರ ನೆನಪಿನಾಳದಲ್ಲಿ ಉಳಿದಿರುತ್ತವೆ. ಭಯಾನಕ ಚಿತ್ರಗಳನ್ನು ವೀಕ್ಷಿಸುವಾಗ ಮೆದುಳಿನ ಆಳದಲ್ಲಿ ಹುದುಗಿದ್ದ ಇಂಥ ಹಲವು ಘಟನೆಗಳು ಅವರಿಗೆ ಬೇಗನೆ ಭಯ ತರುತ್ತವೆ.

ಇದಕ್ಕಾಗಿ 30 ಮಂದಿ ಮಹಿಳೆ ಹಾಗೂ ಪುರುಷರನ್ನು ಅಧ್ಯಯನಕ್ಕೆ ಒಳಪಡಿಸಲಾಯಿತು. ಅವರಿಗೆ ಕೆಲವು ಸುಂದರ ದೃಶ್ಯಗಳನ್ನುಳ್ಳ ಸಕಾರಾತ್ಮಕ ಹಾಗೂ ಹಿಂಸೆ ಹಾಗೂ ಕ್ರೌರ್ಯವನ್ನು ಒಳಗೊಂಡ ನಕಾರಾತ್ಮಕ ಚಿತ್ರಗಳನ್ನು ತೋರಿಸಲಾಯಿತು. ಈ ಸಂದರ್ಭದಲ್ಲಿ ಅವರ ಮೆದುಳಿನಲ್ಲಾಗುವ ಬದಲಾವಣೆಯನ್ನು ಗಮನಿಸಲಾಯಿತು. ಇದರೊಂದಿಗೆ ಅವರ ಸ್ಮೃತಿಕೋಶ ಪರೀಕ್ಷೆಯೂ ನಡೆಯಿತು. ನಕಾರಾತ್ಮಕ ಚಿತ್ರಗಳನ್ನು ನೋಡಿದೊಡನೆ ಮಹಿಳೆಯರ ಮೆದುಳಿನಲ್ಲಿ ಚಟುವಟಿಕೆಗಳು ಒಮ್ಮೆಲೆ ಜೋರಾದವು. ಆದರೆ ಪುರುಷರ ಮೆದುಳು ಸಹಜವಾಗಿಯೇ ಕಾರ್ಯ ನಿರ್ವಹಿಸಿದ್ದನ್ನು ಸಂಶೋಧಕರು ಪತ್ತೆ ಹಚ್ಚಿದ್ದಾರೆ.

ಸಿನಿಮಾದಲ್ಲಿ ನೋಡಿದ ಇಂತಹ ಭಯಾನಕತೆ ಅವರ ಮನಸ್ಸಿನಲ್ಲಿ ಹೇಗೆ ಉಳಿದಿದೆ ಎಂಬುದನ್ನು ಪತ್ತೆ ಮಾಡಲು ಮತ್ತೊಂದು ಪರೀಕ್ಷೆ ನಡೆಸಲಾಯಿತು. ಚಿತ್ರದಲ್ಲಿ ಗಾಬರಿ ಹುಟ್ಟಿಸುವ ದೃಶ್ಯಗಳ ಆರಂಭಕ್ಕೂ ಮುನ್ನ ಒಂದು ಬಗೆಯ ಸಂಗೀತ ನೀಡಲಾಯಿತು. ಇಂಥ ಸಂಗೀತ ಹಾಗೂ ಸನ್ನಿವೇಶ ಮಹಿಳೆಯರ ಮನಸ್ಸಿನ ಆಳದಲ್ಲಿ ಬೇರೂರಿತಂತೆ. ಮುಂದೆಂದಾದರೂ ಇಂಥ ಸಂಗೀತ ಕೇಳಿಬಂದಿದ್ದೇ ಆದಲ್ಲಿ ಅದು ಮುಂದೆ ಬರಬಹುದಾದ ಭಯಾನಕ ದೃಶ್ಯ ಎಂದು ಕ್ಷಣಮಾತ್ರದಲ್ಲಿ ಅವರಿಗೆ ತಿಳಿದು ಭಯಭೀತಿಯಿಂದ ಪ್ರತಿಕ್ರಿಯಿಸುತ್ತಾರಂತೆ.

## ವಿಕಿರಣಕ್ಕೆ ಸೂರ್ಯಕಾಂತಿ ಚಿಕಿತ್ಸೆ

ಭೂಕಂಪ, ಸುನಾಮಿ, ವಿಕಿರಣ ಭೀತಿ– ಹೀಗೆ ಹಲವು ಪ್ರಕೃತಿ ವಿಕೋಪಗಳಿಂದ ತತ್ತರಿಸಿರುವ ಜಪಾನ್‌ನಲ್ಲಿ ಈಗ ಎಲ್ಲೆಡೆಯೂ ಸೂರ್ಯಕಾಂತಿ ಬೆಳೆಯುವಂತೆ ಉತ್ತೇಜಿಸಲಾಗುತ್ತಿದೆಯಂತೆ. ಕಾರಣ ಇಷ್ಟೇ. ಫುಕುಷಿಮಾ ಪರಮಾಣು ಕೇಂದ್ರಕ್ಕಾದ ಹಾನಿಯಿಂದ ಇಡೀ ವಾತಾವರಣದಲ್ಲಿ ಪರಮಾಣು ವಿಕಿರಣ ಸೋಂಕು ತಗುಲಿರುವುದರಿಂದ ಇಲ್ಲಿನ ಮಣ್ಣಿನಲ್ಲೂ ವಿಕಿರಣ ಪತ್ತೆಯಾಗಿದೆ. ವಿಕಿರಣ ಸೋಂಕಿದ ಮಣ್ಣನ್ನು ಶುಚಿಗೊಳಿಸಲು ಸೂರ್ಯಕಾಂತಿ ಅತ್ಯುತ್ತಮವಂತೆ.

ಈಗಾಗಲೇ ಹತ್ತು ಸಾವಿರ ಸೂರ್ಯಕಾಂತಿ ಬೀಜದ ಚೀಲಗಳನ್ನು ಟೋಕಿಯೋ ಹಾಗೂ ಅದರ ಸುತ್ತಮುತ್ತಲಿನ ಮೂವತ್ತು ಸಾವಿರ ಜನರಿಗೆ ವಿತರಿಸಲಾಗಿದೆ. ಸೂರ್ಯಕಾಂತಿ ಬೆಳೆದು ವಿಕಿರಣ ಸೋಂಕಿರುವ ಮಣ್ಣಿಗೆ ಹೊಸ ರೂಪ ನೀಡಲು ಸಿದ್ಧತೆ ನಡೆಸಲಾಗಿದೆ. ಜಪಾನಿಗೆ ಬರುವ ಪ್ರವಾಸಿಗರಿಗೂ ಸೂರ್ಯಕಾಂತಿ ನೀಡಿ ಸ್ವಾಗತಿಸಲು ಸಕಲ ಸಿದ್ಧತೆಗಳೂ ನಡೆದಿವೆ.

■ ಐಎಸ್‌ಎಸ್

---

### ನಕ್ಕು ಬಿಡಿ



ಮರೆಗುಳಿ ಪ್ರಾಧ್ಯಾಪಕ: ಇವೊತ್ತು ಯಾರೋ ನನ್ನ ಕೋಟಿನ ಜೇಬಿನಿಂದ ಪರ್ಸನ್ನು ಪಿಕ್ ಪಾಕೆಟ್ ಮಾಡ್ಬಿಟ್ರು ಕಣೇ.

ಹೆಂಡತಿ: ಕೋಟಿನ ಜೇಬಿಗೆ ಆತ ಕೈ ಹಾಕಿದಾಗ ನಿಮಗೆ ಗೊತ್ತಾಗಲಿಲ್ಲವೇನ್ರೀ!

ಪ್ರಾಧ್ಯಾಪಕ: ಅಯ್ಯೋ! ಆ ಕೈ ನಂದೇ ಅಂತ ತಿಳಕೊಂಡಿದ್ದೆ ಕಣೇ.

★★★

ಪ್ರೇಮಿ: ನಿನಗೆ ಮುತ್ತಿಕ್ಕಿದರೆ ನೀನು ಕಿರುಚಿಕೊಳ್ಳೋದಿಲ್ಲಾ ತಾನೆ?

ಪ್ರೇಯಸಿ: ನನ್ನ ಬಾಯಿ ಮುಚ್ಚಿ ಹೋಗಿರುತ್ತದಲ್ಲ; ಅದ್ಹೇಗೆ ಕಿರುಚಿಕೊಳ್ಳಲಿ!

★★★

ಪ್ರೇಮಿ: (ತನ್ನ ಪ್ರೇಯಸಿಯ ತಂದೆ ಜೊತೆ) ಸರ್! Formalities sake ನಿಮ್ಮ daughterನ್ನ ನಾನು ಮದುವೆಯಾಗುತ್ತೇನೆ.

ಪ್ರೇಯಸಿಯ ತಂದೆ: ನಿನಗೆ ಯಾರು ಹೇಳಿದರು ಈ ಮದುವೆ ಒಂದು formality ಅಂತಾ?

ಪ್ರೇಮಿ: ನಿಮ್ಮ daughterನ ಪರೀಕ್ಷೆ ಮಾಡಿದ ಲೇಡಿ ಡಾಕ್ಟರ್ ಸರ್!

–ಕೆ.ಜಯಮ್ಮ



ಗಂಡ: ನೀನೊಬ್ಬ ಪ್ರತಿಷ್ಠಿತ ಮರ್ಯಾದಸ್ಥ ಕುಟುಂಬದ ಸೊಸೆ ಅನ್ನೋದನ್ನು ಮರೀ ಬೇಡ

ಹೆಂಡತಿ: ಸೊಸೆ ಅಲ್ಲಾರೀ ಮಗಳು. ಹೇಳೋದು ಹೇಳ್ತೀರಾ.. ಮೊದಲು ಸರಿಯಾಗಿ ಹೇಳೋದನ್ನು ಮೊದಲು ಕಲಿತು ಕೊಳ್ಳಿ!

★★★

ಸೀತಾ: ಈ ಊರಿನಲ್ಲೇ ನನ್ನಂಥ ಸುಂದರಿ ಇನ್ನೊಬ್ಬಳಿಲ್ಲ, ಅಂತ ನಮ್ಮ ಯಜಮಾನರು ಆಗಾಗ್ಗೆ ಹೇಳ್ತಿರ್ತಾರೆ ಕಣೇ.

ಗೀತಾ: ಹೌದಾ! ನಿನ್ನೆ ಸಂಜೆ ತಾನೇ ಅವರು ಬಾರ್ ನಿಂದ ಈಚೆ ಬಂದು ಕಣ್ ಡಾಕ್ಟರ್ ಹತ್ರ ಹೋಗ್ತಿದ್ದನ್ನು ನಾನೇ ನನ್ನ ಕಣ್ಣಾರೆ ನೋಡಿದೆನಲ್ಲೇ!

★★★



ಮಾಣಿ: ಸಾರ್ ಊಟದ ಎಲೆಗೆ ಕೈ ಹಾಕೋದಿಕ್ಕೆ ಮೊದಲೇ ದುಡ್ಡು ಕೊಟ್ಬಿಡಿ.

ಗಿರಾಕಿ: ಯಾಕಯ್ಯಾ?

ಮಾಣಿ: ನಿನ್ನೆ ಒಬ್ಬರು ಇಲ್ಲಿ ಊಟ ಮಾಡ್ತಿದ್ದಾಗಲೇ ಗೊಟಕ್ ಅಂದ್ರು; ಯಜಮಾನರು ನನ್ನ ಸಂಬಳದಲ್ಲಿ ಬಿಲ್ ಹಣ ಹಿಡಕೋತಾರಂತೆ.. ಅದಕ್ಕೆ.

–ಪಿ.ಎಲ್.ಶೃಂಗಾರ್